## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರೂಪು-ರೇಷೆಗಳು, ಅಧಿಕಾರ ವ್ಯಾಪ್ತಿ ನೀಡಿಕೆ ಬಗ್ಗೆ ಆದೇಶ.

ಉಲ್ಲೇಖ :- ಅಧಿಸೂಚನೆ ಸಂಖ್ಯೆ ಡಿಪಿ.ಎ.ಆರ್. 18 ಕೆ.ಒ.ಎಲ್ 92, ದಿನಾಂಕ 6ನೇ ಫೆಬ್ರವರಿ 1992 ಮತ್ತು ಆದೇಶ ಸಂಖ್ಯೆ ದಿನಾಂಕ 29 ಫೆಬ್ರವರಿ 1992.

**ಪ್ರಸ್ತಾವನೆ :**

ಸರ್ಕಾರದ ಭಾಷಾ ನಿತಿಗೆ ಸಂಬಂಧಿಸಿದ ಆದೇಶಗಳು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬಂದಿವೆಯೇ ಎಂಬುದನ್ನು ಪರಿಶೀಲಿಸಿ ಸಲಹೆ ಸೂಚನೆಗಳನ್ನು ನಿಡಲು ಹಾಗೂ ಸರ್ಕಾರ ಈಗಾಗಲೇ ಒಪ್ಪಿರುವ ಡಾ. ಸರೋಜಿನಿ ಮಹಿಷಿ ವರದಿ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೆ ತರುವ ಉದ್ದೇಶದಿಂದ ಕಾರ್ಯ ವಿಧಾನವನ್ನು ರೂಪಿಸಲು ಶ್ರಿ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಲಾಗಿದೆ. ಸದರಿ ಪ್ರಾಧಿಕಾರದ ರೂಪುರೇಷೆಗಳು, ಅಧಿಕಾರವ್ಯಾಪ್ತಿ ಇತ್ಯಾದಿಗಳ ಬಗ್ಗೆ ಆದೇಶ ಹೊರಡಿಸಬೇಕಾಗಿದೆ.

ಆದೇಶ ಸಂಖ್ಯೆ ಡಿಪಿ.ಎ.ಆರ್. 182 ಕೆ.ಒ.ಎಲ್. 92,

ಬೆಂಗಳೂರು, ದಿನಾಂಕ 6ನೇ ಜುಲೈ 1992.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರೂಪು-ರೇಷೆಗಳು, ಅಧಿಕಾರವ್ಯಾಪ್ತಿ, ಲೆಕ್ಕ ಶಿರ್ಷಿಕೆ ಬಗ್ಗೆ ಸರ್ಕಾರ ಕೆಳಕಂಡಂತೆ ಆದೇಶಿಸಿದೆ. :-

1. **ಕಾರ್ಯವ್ಯಾಪ್ತಿ:**

ಅ) ಸರ್ಕಾರದ ಆಡಳಿತ ಭಾಷಾ ನಿತಿಯನ್ನು ಜಾರಿಗೆ ತರಲು ಬೇರೆ ಬೇರೆ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ಸ್ಥಳೀಯ ಸಂಸ್ಥೆಗಳು, ಸರ್ಕಾರದಿಂದ ರಚಿತವಾದ ಹಾಗೂ ಸರ್ಕಾರದ ಅನುದಾನ ಪಡೆಯುತ್ತಿರುವ ಎಲ್ಲ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳ ಪರಿಶೀಲನೆ;

ಆ) ಸರ್ಕಾರ ಅಂಗೀಕರಿಸಿರುವ ಡಾ. ಸರೋಜಿನಿ ಮಹಿಷಿ ವರದಿಯ

ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಕಾರ್ಯವಿಧಾನಗಳನ್ನು ರೂಪಿಸಿ ಸಂಬಂಧಪಟ್ಟ ಇಲಾಖೆಗಳ ಮೂಲಕ ಜಾರಿಗೊಳಿಸಲು ಕ್ರಮ ಕೈಗೊಳ್ಳುವುದು;

ಇ) ಕನ್ನಡವನ್ನು ಆಡಳಿತ ಭಾಷೆಯಾಗಿ ಸಂಪೂರ್ಣವಾಗಿ ಜಾರಿಗೆ ತರಲು ಇರುವ ಅಡಚಣೆಗಳನ್ನು ಗುರುತಿಸಿ ಅವುಗಳನ್ನು ನಿವಾರಿಸಲು ಸರ್ಕಾರಕ್ಕೆ ಸಲಹೆ ನಿಡುವುದು;

ಈ) ಆಡಳಿತ ಪೂರಕ ಸಾಹಿತ್ಯ, ತರಬೇತಿ, ಸೇವಾಪರೀಕ್ಷೆಗಳು (ಭಾಷಾ ಪರೀಕ್ಷೆ) ಇವುಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲಹೆ ನೀಡುವುದು;

ಉ) ಸರ್ಕಾರಿ ಅಧಿಕಾರಿಯ ಸಮಕ್ಷಮದಲ್ಲಿ ಕಛೇರಿಗಳಲ್ಲಿ ಕನ್ನಡ ಬಳಕೆ ತನಿಖೆ ಕೈಗೊಂಡು ಕನ್ನಡ ಅನುಷ್ಠಾನ ಸಂಬಂಧ ಆದೇಶಗಳು ಉಲ್ಲಂಘನೆಯಾಗಿದ್ದರೆ ಅಂತಹವರ ಮೇಲೆ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ವರದಿ ಮಾಡುವುದು;

ಊ) ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸರ್ಕಾರ ವಹಿಸಬಹುದಾದ ಇತರ ಯಾವುದೇ ವಿಷಯಗಳು.

**2. ಪ್ರಾಧಿಕಾರದ ಅಧಿಕಾರವ್ಯಾಪ್ತಿ:**

ಅ) ಪ್ರಾಧಿಕಾರದ ಅಧ್ಯಕ್ಷರು ಯಾವುದೇ ಕಛೇರಿಗೆ ಭೇಟಿ ನಿಡಲು ಅಧಿಕಾರ ಹೊಂದಿರುತ್ತಾರೆ.

ಆ) ಪ್ರಾಧಿಕಾರದ ಅಧ್ಯಕ್ಷರು ಈ ಆದೇಶದಲ್ಲಿನ ಕಾರ್ಯವ್ಯಾಪ್ತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಯಾವುದೇ ಅಧಿಕಾರಿಯೊಂದಿಗೆ, ಕಛೇರಿಯೊಂದಿಗೆ ನೇರವಾಗಿ ವ್ಯವಹರಿಸಿ, ಮಾಹಿತಿ, ಸ್ಪಷ್ಟೀಕರಣ ಪಡೆಯಬಹುದು ಹಾಗೂ ನೀಡಬಹುದು.

**3. ಸದಸ್ಯರ ಪ್ರಯಾಣಭತ್ಯೆ ಮತ್ತು ದಿನಭತ್ಯೆ :**

ಪ್ರಾಧಿಕಾರದ ಸದಸ್ಯರುಗಳ ಪ್ರಯಾಣಭತ್ಯೆ, ದಿನಭತ್ಯೆ, ಸಭಾಭತ್ಯೆ, ಇತ್ಯಾದಿ ಸೌಲಭ್ಯಗಳು ಚಾಲ್ತಿಯಲ್ಲಿರುವ ನಿಯಮಗಳು ಮತ್ತು ಆದೇಶಗಳ ಪ್ರಕಾರ ಕೊಡಲಾಗುವುದು.

4. ಲೆಕ್ಕ ಶೀರ್ಷಿಕೆ :

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ, ಅವರ ಆಪ್ತಸಿಬ್ಬಂದಿಗೆ, ಪ್ರಾಧಿಕಾರದ ಸದಸ್ಯರಿಗೆ ಮತ್ತು ಒದಗಬಹುದಾದ ಇತರ ಯಾವುದೇ ಖರ್ಚನ್ನು

ಲೆಕ್ಕಶೀರ್ಷಿಕೆ ''2052 - ಸಚಿವಾಲಯ ಸಾಮಾನ್ಯ ಸೇವೆ - 01 ಸಚಿವಾಲಯ - 02 ಸಮಿತಿಗಳು ಮತ್ತು ಸಮ್ಮೇಳನಗಳು, ನ್ಯಾಯಾಧಿಕರಣಗಳು ಮೊದಲಾದವುಗಳಿಗೆ ಸಂಬಂಧಪಟ್ಟ ವೆಚ್ಚ(ಯೋಜನೇತರ) ದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಅನಧಿಕೃತ ಟಿಪ್ಪಣಿ ಕ್ರಮಾಂಕ ಆಇ 2791 ವೆಚ್ಚ 5:92 ದಿನಾಂಕ : 6-7-1992ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/-

**(ಸಣ್ಣನಂಜೇಗೌಡ),**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಡಳಿತ ಕನ್ನಡ ಶಾಖೆ).